SEPTEMBER 25, 2026

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು:**

<><><>

- **ವಿ.ಬಿ. ಜಿ ರಾಮ್ ಜಿ ಯೋಜನೆ;** ರಾಜ್ಯದ ಬರ ನಿರ್ವಹಿಸಲು, 1 ಕೋಟಿ 60 ಲಕ್ಷ ಮಾನವ ದಿನಗಳ, ಕೂಲಿ ಸೃಜನೆ.
- **'ರೈತ ಸಿರಿ'; ರೈತರ ಮೌಲ್ಯವರ್ಧಿತ** ಉತ್ಪನ್ನಗಳ ಮಾರಾಟಕ್ಕೆ, ಏಕೀಕೃತ ಬ್ರ್ಯಾಂಡಿಂಗ್ ವ್ಯವಸ್ಥೆ.
- **ಸೇವಾ ಸಂಕಲ್ಪ ಅಭಿಯಾನ;** ಸೆಮಿಕಂಡಕ್ಟರ್ ಮಿ ನ್ ಅಡಿ, ಕಿತ್ತೂರು ಕರ್ನಾಟಕ, ವಿಶೇಷ ವಲಯ.
- **138ನೇ ಮನ್ ಕಿ ಬಾತ್ ಸಂಚಿಕೆ;** ಭಾನುವಾರ ಬೆಳಗ್ಗೆ, 11 ಗಂಟೆಗೆ ಪ್ರಸಾರ.

<><><>

**ಈಗ ವಾರ್ತೆಗಳ ವಿವರ**

<><><>

**ರಾಜ್ಯದ ತೀವ್ರ ಬರ ಪರಿಸ್ಥಿತಿ ನಿರ್ವಹಿಸಲು,** ವಿಕಸಿತ ಭಾರತ, ಗ್ರಾಮೀಣ ಉದ್ಯೋಗ ಖಾತ್ರಿ ಹಾಗೂ ಜೀವನೋಪಾಯ ಮಿಷನ್, ವಿ.ಬಿ. ಜಿ ರಾಮ್ ಜಿ ಯೋಜನೆಯಡಿ, 1 ಕೋಟಿ 60 ಲಕ್ಷ ಮಾನವ ದಿನಗಳ ಕೂಲಿ ಸೃಜಿಸಲಾಗುತ್ತಿದೆ ಎಂದು, ಗ್ರಾಮೀಣಾಭಿವೃದ್ಧಿ ಖಾತೆ ಸಚಿವ, ಈಶ್ವರ ಖಂಡ್ರೆ, ವಿಧಾನಸಭೆಗೆ ತಿಳಿಸಿದ್ದಾರೆ. ವಿಶೇಷ ಅಧಿವೇಶನದ ನಾಲ್ಕನೇ ದಿನ, ಬರ ಕುರಿತ ಚರ್ಚೆಯಲ್ಲಿ ಪಾಲ್ಗೊಂಡು ಅವರು, ಮಾತನಾಡಿದರು. ಗ್ರಾಮೀಣ ಭಾಗದಲ್ಲಿ, ಶ್ರಮದಾನದ ಮೂಲಕ, ಸ್ಥಿರ ಆಸ್ತಿ ನಿರ್ಮಾಣ, ಅಂತರ್ಜಲ ಮರುಪೂರಣದ 318 ಕಾಮಗಾರಿಗಳಿಗೆ, 2 ಸಾವಿರದ ಒಂಬೈನೂರು ಕೋಟಿ ರೂಪಾಯಿ ಒದಗಿಸಲಾಗುತ್ತಿದೆ. ಸಾವಿರ ಕೋಟಿ ರೂಪಾಯಿ, ಜಿಲ್ಲೆಗಳಿಗೆ ಮುಂಗಡವಾಗಿ ನೀಡಲಾಗಿದೆ ಎಂದರು.

<><><>

**ರಾಜ್ಯದ ರೈತರು, ತಮ್ಮ ಮೌಲ್ಯವರ್ಧಿತ** ಉತ್ಪನ್ನಗಳನ್ನು ಎಲ್ಲೆಡೆ ಮಾರಲು, ಅನುವಾಗುವಂತೆ, 'ರೈತಸಿರಿ' ಏಕೀಕೃತ ಬ್ರ್ಯಾಂಡಿಂಗ್ ವ್ಯವಸ್ಥೆ ರೂಪಿಸಲಾಗಿದೆ ಎಂದು, ಕೃಷಿ ಖಾತೆ ಸಚಿವ, ಪಿ.ಎಂ. ನರೇಂದ್ರ ಸ್ವಾಮಿ ತಿಳಿಸಿದ್ದಾರೆ. ಬೆಂಗಳೂರಿನ ಮಲ್ಲೇಶ್ವರಂನಲ್ಲಿ, ರಾಜ್ಯ ರೈತ ಉತ್ಪಾದಕರ ಸಂಸ್ಥೆಗಳ, ಸಹಕಾರ ಸಂಘದ, ಏಕೀಕೃತ ಬ್ರ್ಯಾಂಡ್ 'ರೈತಸಿರಿ' ಮೊದಲ ಮಳಿಗೆ ಉದ್ಘಾಟಿಸಿ, ಅವರು ಮಾತನಾಡಿದರು. ಪ್ರಸ್ತುತ 162 ರೈತ ಉತ್ಪಾದಕರ ಸಂಸ್ಥೆಗಳು ಸಂಘದ ಸದಸ್ಯತ್ವ ಪಡೆದಿವೆ. 52 ಸಾವಿರಕ್ಕೂ ಹೆಚ್ಚು, ರೈತ ಷೇರುದಾರರು, ಸಂಘದ ಭಾಗವಾಗಿದ್ದಾರೆ. raithasiri.co.in ಜಾಲತಾಣದ ಮೂಲಕ, ಆನ್‌ಲೈನ್ ವೇದಿಕೆ ಕಲ್ಪಿಸಲಾಗಿದೆ, ಎಂದರು.

<><><>

**ಧಾರವಾಡ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ,** ಇಂದಿನಿಂದ ನಾಲ್ಕು ದಿನಗಳ ಕಾಲ, ಕೃಷಿ ಮೇಳ ನಡೆಯಲಿದೆ. ಸಂಯುಕ್ತ ರಾಷ್ಟ್ರ ಸಂಘ – ಯು.ಎನ್.ಓ. ಪ್ರಸಕ್ತ ವರ್ಷವನ್ನು, 'ಅಂತಾರಾಷ್ಟ್ರೀಯ ಕೃಷಿ ಮಹಿಳೆಯರ ವರ್ಷ' ಎಂದು ಘೋಷಿಸಿದ್ದು, ಈ ಬಾರಿಯ ಕೃಷಿ ಮೇಳ, ಕೃಷಿಕ ಮಹಿಳೆಯರಿಗೆ ಸಮರ್ಪಿತವಾಗಿದೆ. ಕೃಷಿಕ ನವೋದ್ಯಮ ಕೇಂದ್ರದಲ್ಲಿ, ನೂರಕ್ಕೂ ಹೆಚ್ಚು ನವೋದ್ಯಮಿಗಳು, ಕೃಷಿ, ಕೈಗಾರಿಕೆಳಿಗೆ ಸಂಬಂಧಿಸಿದ, ಉತ್ಪನ್ನ ಮತ್ತು ಸೇವೆಗಳನ್ನು 'ಸಕ್ಷಮ ಕೃಷಿ ತಂತ್ರಜ್ಞಾನಗಳ ಪ್ರಾತ್ಯಕ್ಷಿಕೆ ಮಳಿಗೆ' ಸಂಖ್ಯೆ 308 ರಿಂದ 312ರ ವರೆಗೆ ಪ್ರದರ್ಶಿಸಲಿದ್ದಾರೆ. ವಿಶೇಷ ತಳಿಯ ಶ್ವಾನ, ರಾಸುಗಳು, ಕುಕ್ಕಟ ಪ್ರದರ್ಶನ ಮೇಳದ ಆಕರ್ಷಣೆ.

<><><>

**ಸೇವಾ ಸಂಕಲ್ಪ ಮಾಸಿಕ ಅಭಿಯಾನದ ಅಂಗವಾಗಿ,** ಮಹತ್ವದ ಯೋಜನೆಗಳ ಕುರಿತು, ಜನ ಜಾಗೃತಿ ಸರಣಿ ಕಾರ್ಯಕ್ರಮಗಳನ್ನು, ಆಕಾಶವಾಣಿ ಪ್ರಸಾರ ಮಾಡುತ್ತಿದೆ. ಇಂದಿನ ಆವೃತ್ತಿಯಲ್ಲಿ, ಸೆಮಿಕಂಡಕ್ಟರ್ ಮಿಷನ್ – 2021ರ ಕುರಿತ, ಒಂದು ನೋಟ. 2021, ಡಿಸೆಂಬರ್ 21 ರಂದು, 76 ಸಾವಿರ ಕೋಟಿ ರೂಪಾಯಿ ವೆಚ್ಚದ 'ಸೆಮಿಕಾನ್ ಇಂಡಿಯಾ ಯೋಜನೆ'ಯನ್ನು ಕೇಂದ್ರ ಸರ್ಕಾರ ಘೋಷಿಸಿತು.ದೇಶದಲ್ಲೇ ಸೆಮಿಕಂಡಕ್ಟರ್ ಉತ್ಪಾದನೆಯ, ಸಮಗ್ರ ಪರಿಸರ ವ್ಯವಸ್ಥೆ ನಿರ್ಮಿಸುವುದು, ಈ ಯೋಜನೆಯ ಉದ್ದೇಶ. ಚಿಪ್‌ಗಳ ವಿನ್ಯಾಸ, ತಯಾರಿಕೆ, ಫ್ಯಾಬ್ರಿಕೇಶನ್ ಮತ್ತು ಪ್ಯಾಕೇಜಿಂಗ್ ಸೇರಿದಂತೆ, ಸಂಪೂರ್ಣ ಸೆಮಿಕಂಡಕ್ಟರ್ ಸರಪಳಿಯನ್ನು, ಅಭಿವೃದ್ಧಿಪಡಿಸಲು, ಇಂಡಿಯಾ ಸೆಮಿಕಂಡಕ್ಟರ್ ಮಿಷನ್ ಸ್ಥಾಪಿಸಲಾಯಿತು. ಇದು ವರೆಗೆ, 1 ದಶಾಂಶ 6 ಲಕ್ಷ ಕೋಟಿ ಮೌಲ್ಯದ, 10 ಯೋಜನೆಗಳಿಗೆ ಅನುಮೋದನೆ ದೊರೆತಿದ್ದು, ಆ ಪೈಕಿ, 2 ಫ್ಯಾಬ್ರಿಕೇಶನ್ ಮತ್ತು 8 ಪ್ಯಾಕೇಜಿಂಗ್ ಘಟಕಗಳು ಸೇರಿವೆ. ನಾಲ್ಕು ಘಟಕಗಳಲ್ಲಿ ಈಗಾಗಲೇ ಪ್ರಾಯೋಗಿಕ ಉತ್ಪಾದನೆ ಆರಂಭವಾಗಿದೆ.

<><><>

**ಧಾರವಾಡ ಜಿಲ್ಲೆ, ಹುಬ್ಬಳ್ಳಿಯ,** ಕೆ.ಎಲ್.ಇ. ತಾಂತ್ರಿಕ ವಿಶ್ವವಿದ್ಯಾಲಯದ, ಇಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್, ವಿ.ಎಲ್.ಎಸ್.ಐ, ವಿನ್ಯಾಸ ಹಾಗೂ ತಂತ್ರಜ್ಞಾನ ವಿಭಾಗದ, ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರಾದ, ಡಾಕ್ಟರ್ ಸುಜಾತಾ ಸಂಜಯ ಕೊಟಬಾಗಿ, ಸೆಮಿಕಂಡಕ್ಟರ್ ವಲಯವಾಗಿ, ಕಿತ್ತೂರು ಕರ್ನಾಟಕ ಭಾಗವನ್ನು, ವಿಶೇಷ ಕೈಗಾರಿಕಾ ಪ್ರದೇಶವಾಗಿ ಅಭಿವೃದ್ಧಿ ಪಡಿಸಲಾಗುತ್ತಿದ್ದು, ಪ್ರಸ್ತುತ ಸ್ಥಿತಿ–ಗತಿಯ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ.

<><><>

**ಡಾ. ಸುಜಾತಾ ಸಂಜಯ ಕೊಟಬಾಗಿ ಧ್ವನಿ 70 ಸೆಕೆಂದುಗಳು**

<><><>

**ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..**

**(37 ಸೆಕೆಂದುಗಳು)**

<><><>

**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..**

<><><>

**ಅಕ್ಟೋಬರ್ 11 ರಿಂದ 21 ರ ವರೆಗೆ** ನಡೆಯಲಿರುವ, ಪ್ರಸಕ್ತ ವರ್ಷದ ನಾಡಹಬ್ಬ ಮೈಸೂರು ದಸರಾ ಮಹೋತ್ಸವವನ್ನು, ಕೊಪ್ಪಳ ಜಿಲ್ಲೆ ಗವಿಮಠದ ಶ್ರೀ ಅಭಿನವ ಗವಿಸಿದ್ದೇಶ್ವರ ಶ್ರೀಗಳು ಉದ್ಘಾಟಿಸಲಿದ್ದಾರೆ. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ವಿಧಾನಸಭೆಗೆ ವಿಷಯ ತಿಳಿಸಿದರು. ಇಡೀ ಸದನ ಸಹರ್ಷ, ಮೇಜುಕಟ್ಟಿ ಸ್ವಾಗತಿಸಿತು.

<><><>

**ಆಕಾಶವಾಣಿಯ, ಬಹುಶ್ರುತ,** ಮನ್ ಕಿ ಬಾತ್ ಕಾರ್ಯಕ್ರಮ, ನಾಡಿದ್ದು 27ನೇ ತಾರೀಖು, ಬೆಳಗ್ಗೆ 11 ಗಂಟೆಗೆ ಪ್ರಸಾರವಾಗಲಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, 138ನೇ ಸಂಚಿಕೆಯಲ್ಲಿ, ದೇಶ, ವಿದೇಶಗಳ ಭಾರತೀಯರೊಂದಿಗೆ, ತಮ್ಮ ಮನದ ಮಾತು, ಹಂಚಿಕೊಳ್ಳಲಿದ್ದಾರೆ. ಹಿಂದಿ ಅವತರಣಿಕೆ ಬಳಿಕ, ಕನ್ನಡ ಸೇರಿದಂತೆ, ಇತರೆ ಪ್ರಾದೇಶಿಕ ಭಾ  ೆಗಳಲ್ಲಿ, ಮನದ ಮಾತು, ಆಕಾಶವಾಣಿ ಮೂಲಕ, ಪ್ರಸಾರವಾಗಲಿದೆ.

<><><>

**ನಿಧನ ವಾರ್ತೆ**

<><><>

**ಗುರುವಾರ ನಿಧನರಾದ,** ಖ್ಯಾತ ಮನೋಆರೋಗ್ಯ ತಜ್ಞ ವೈದ್ಯ, ಡಾಕ್ಟರ್ ಆನಂದ ಪಾಂಡುರಂಗಿ ಅವರ, ಪಾರ್ಥಿವ ಶರೀರದ ಅಂತ್ಯಕ್ರಿಯೆ, ಧಾರವಾಡದಲ್ಲಿ ನಿನ್ನೆ ರಾತ್ರಿ ಸರ್ಕಾರಿ ಗೌರವಗಳೊಂದಿಗೆ ನಡೆಯಿತು. 74 ವರ್ಷ ವಯಸ್ಸಿನ, ಡಾಕ್ಟರ್ ಆನಂದ ಪಾಂಡುರಂಗಿ, ರಾಜ್ಯೋತ್ಸವ ಪ್ರಶಸ್ತಿ ಹಾಗೂ ಡಾಕ್ಟರ್ ಬಿ.ಸಿ. ರಾಯ್ ಪುರಸ್ಕಾರಕ್ಕೆ, ಭಾಜನರಾಗಿದ್ದರು. ಸಮಾಜಮುಖಿ, ವೈದ್ಯ ಸಾಹಿತಿ ಹಾಗೂ ಅಂಕಣಕಾರರಾಗಿದ್ದ ಅವರ ನಿಧನಕ್ಕೆ, ಮುಖ್ಯಮಂತ್ರಿ, ವಿಪಕ್ಷ ನಾಯಕರು ಹಾಗೂ ಉಪನಾಯಕರು ಸೇರಿದಂತೆ, ನಾಡಿನ ಅನೇಕ ಗಣ್ಯರು, ಶ್ರದ್ಧಾಂಜಲಿ ಅರ್ಪಿಸಿದ್ದಾರೆ.

<><><>

**ಬಾಗಲಕೋಟೆ ಜಿಲ್ಲೆ, ಹುನಗುಂದ ತಾಲೂಕು,** ಐಹೊಳೆಯಲ್ಲಿ, ಸಿಡಿಲು ಬಡಿದು ಇಬ್ಬರು ಮೃತಪಟ್ಟಿದ್ದು, ಆರು ಮಂದಿ ಗಾಯಗೊಂಡಿದ್ದಾರೆ. ಗಾಯಗೊಂಡ ನಾಲ್ವರನ್ನು, ಹೆಚ್ಚಿನ ಚಿಕಿತ್ಸೆಗಾಗಿ, ಬಾಗಲಕೋಟೆ ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಇಬ್ಬರು ಐಹೊಳೆ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಜಿಲ್ಲಾಧಿಕಾರಿ ಸಂಗಪ್ಪ, ಜಿಲ್ಲಾ ಆಸ್ಪತ್ರೆಗೆ ತೆರಳಿ, ಗಾಯಾಳುಗಳ ಆರೋಗ್ಯ ವಿಚಾರಿಸಿದರು.

<><><>

**ಶಾಲಾ ಶಿಕ್ಷಣ ಇಲಾಖೆ,** ಪದವಿ ಪೂರ್ವ ವಿಭಾಗ ಹಾಗೂ ಶಿವಮೊಗ್ಗದ ವಿಕಾಸ ಪದವಿ ಪೂರ್ವ ಮಹಾವಿದ್ಯಾಲಯದ, ಸಹಯೋಗದಲ್ಲಿ ಆಯೋಜಿಸಿದ್ದ, ರಾಜ್ಯ ಮಟ್ಟದ ವೇಟ್ ಲಿಫ್ಟಿಂಗ್ ಪಂದ್ಯಾವಳಿಗೆ, ಶಾಸಕ ಎಸ್.ಎನ್.ಚನ್ನಬಸಪ್ಪ, ಚಾಲನೆ ನೀಡಿದರು. ಶಾಲಾ ಶಿಕ್ಷಣ ಇಲಾಖೆ ಉಪ ನಿರ್ದೇಶಕ, ಚಂದ್ರಪ್ಪ ಗುಂಡಪಲ್ಲಿ ಮಾತನಾಡಿ, ವೇಟ್ ಲಿಫ್ಟಿಂಗ್ ಸ್ಪರ್ಧೆಯಲ್ಲಿ, 72 ಬಾಲಕಿಯರು ಮತ್ತು 113 ಬಾಲಕರು ಸೇರಿದಂತೆ, ಒಟ್ಟು 185 ಕ್ರೀಡಾಪಟುಗಳು ಪಾಲ್ಗೊಂಡಿದ್ದಾರೆ, ಎಂದರು.

<><><>

**ಸಂಕ್ಷಿಪ್ತ ಸುದ್ದಿಗಳು**

<><><>

**ಇಂದು, ವಿಶ್ವ ಔಷಧ ವ್ಯಾಪಾರಿಗಳ** ದಿನವನ್ನು, “ಆರೋಗ್ಯಕರ ಭವಿ ್ಯಕ್ಕಾಗಿ ಫಾರ್ಮಾಸಿಸ್ಟ್‌ಗಳ ಸಬಲೀಕರಣ” ಎಂಬ, ಧ್ಯೇಯದೊಂದಿಗೆ, ಆಚರಿಸಲಾಗುತ್ತಿದೆ.

<><><>

**ರಾಯಚೂರಿನ, ಆದಿಕವಿ ಶ್ರೀ ಮಹರ್ಷಿ** ವಾಲ್ಮೀಕಿ ವಿಶ್ವವಿದ್ಯಾಲಯದ ಕುಲಸಚಿವ, ಡಾಕ್ಟರ್ ಎ. ಚನ್ನಪ್ಪ, ವಿಕಸಿತ ಭಾರತ ರಸಪ್ರಶ್ನೆ ಸ್ಪರ್ಧೆಯ, ಮಾಹಿತಿ ಪತ್ರಕ ಬಿಡುಗಡೆಗೊಳಿಸಿದರು.

<><><>

**ಚಾಮರಾಜನಗರ ತಾಲೂಕು,** ಕುಳ್ಳೂರು ಗ್ರಾಮದ ಸುವರ್ಣಾವತಿ ಜಲಾಶಯದ ಹಿನ್ನೀರಿನಲ್ಲಿ, ಕಾಡಾನೆ ದಾಳಿಗೆ, ಮಹಾದೇವ ಮೃತಪಟ್ಟಿದ್ದಾರೆ.

<><><>

**ಶಿವಮೊಗ್ಗ ಜಿಲ್ಲೆ, ಸಕ್ರೆಬೈಲು ಆನೆ ಬಿಡಾರಕ್ಕೆ,** ನಾಳೆಯಿಂದ ಸಾರ್ವಜನಿಕರ ಪ್ರವೇಶವನ್ನು, ಅರಣ್ಯ ಇಲಾಖೆ, ಅನುಮತಿಸಿದೆ.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

<><><>

- **ವಿ.ಬಿ. ಜಿ ರಾಮ್ ಜಿ ಯೋಜನೆ;** ರಾಜ್ಯದ ಬರ ನಿರ್ವಹಿಸಲು, 1 ಕೋಟಿ 60 ಲಕ್ಷ ಮಾನವ ದಿನಗಳ, ಕೂಲಿ ಸೃಜನೆ.
- **‘ರೈತ ಸಿರಿ’; ರೈತರ ಮೌಲ್ಯವರ್ಧಿತ** ಉತ್ಪನ್ನಗಳ ಮಾರಾಟಕ್ಕೆ, ಏಕೀಕೃತ ಬ್ರ್ಯಾಂಡಿಂಗ್ ವ್ಯವಸ್ಥೆ.
- **ಸೇವಾ ಸಂಕಲ್ಪ ಅಭಿಯಾನ;** ಸೆಮಿಕಂಡಕ್ಟರ್ ಮಿ ‘ನ್ ಅಡಿ, ಕಿತ್ತೂರು ಕರ್ನಾಟಕ, ವಿಶೇಷ ವಲಯ.
- **138ನೇ ಮನ್ ಕಿ ಬಾತ್ ಸಂಚಿಕೆ;** ಭಾನುವಾರ ಬೆಳಗ್ಗೆ, 11 ಗಂಟೆಗೆ ಪ್ರಸಾರ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>